# ಮರಳಿದ್ದಾಳೆ ದೀಪಿಕಾ

ಮದುವೆಯಾದ ಬಳಿಕ ದೀಪಿಕಾ–ರಣ್‌ವೀರ್ ಜೋಡಿ ಹನಿಮೂನ್ ಮೂಡ್‌ನಿಂದ ಇನ್ನೂ ಹೊರಬಂದಂತಿಲ್ಲ. ಇತ್ತೀಚೆಗೆ ಪ್ರಶಸ್ತಿ ಪ್ರದಾನ ಸಮಾರಂಭವೊಂದರ ವೇದಿಕೆಯಲ್ಲಿ ಪತಿ ರಣ್‌ವೀರ್‌ನ ದಣಿವರಿಯದ ಡಾನ್ಸ್ ನೋಡಿ ದೀಪಿಕಾ ಖುಷಿಯಿಂದ ಕುಣಿದಳು. ವೇದಿಕೆಯ ಮೇಲಿಂದಲೇ ರಣ್‌ವೀರ್ ಫ್ಲೈಯಿಂಗ್ ಕಿಸ್ ಕೊಟ್ಟರೆ ಅದನ್ನು ಅಷ್ಟೇ ಜೋಶ್‌ನಿಂದ ಮರಳಿಸಿದ್ದೂ ಆಯಿತು. ಬಳಿಕ ವೇದಿಕೆಯ ಮೇಲೆ ನಿರ್ದೇಶಕ ಬನ್ಸಾಲಿ ಅವರ ಕೈಯಿಂದ ಪ್ರಶಸ್ತಿ ಸ್ವೀಕರಿಸಿದ ರಣ್‌ವೀರ್, ಗುರುವಿಗೆ ಕೃತಜ್ಞತೆ ಹೇಳುತ್ತಾ, 'ನನಗೆ ನಟಿಸಲು ಅತ್ಯುತ್ತಮ ಅವಕಾಶಗಳನ್ನು ಕೊಟ್ಟವರು ನೀವು. ನನಗೆ ಜೀವ ಕೊಟ್ಟವರು. ಎಲ್ಲಕ್ಕಿಂತ ಹೆಚ್ಚಾಗಿ ಪತ್ನಿಯನ್ನು ಕೊಟ್ಟವರು' ಎಂದು ಕೆಳಗೆ ಕೂತಿದ್ದ ದೀಪಿಕಾ ಕಡೆಗೆ ಕೈತೋರಿಸಿದಾಗ, ಕೂತಲ್ಲೇ ದೀಪಿಕಾ ಕೂಡಾ ಭಾವುಕಳಾಗಿದ್ದಳು. ಭಾಗವಹಿಸುವ ಎಲ್ಲ ಸಮಾರಂಭಗಳಲ್ಲೂ ಈ ಪತಿ–ಪತ್ನಿ ಜೋಡಿ ಇನ್ನೂ ಬ್ಯಾಚುಲರ್ ಜೋಡಿಯಂತೆ ಓಡಾಡುತ್ತಿದೆ.

ಮದುವೆಯ ಬಳಿಕ ದೀಪಿಕಾ ನಟಿಸುತ್ತಿರುವ ಮೊದಲ ಚಿತ್ರ 'ಛಪಾಕ್' ಶೂಟಿಂಗ್ ಭರದಿಂದ ನಡೆದಿದೆ. ಈ ಚಿತ್ರವನ್ನು ಫಾಕ್ಸ್‌ಸ್ಟಾರ್ ಜೊತೆ ಸೇರಿ ದೀಪಿಕಾಳೇ ನಿರ್ಮಿಸುತ್ತಿದ್ದಾಳೆ. ಮೇಘನಾ ಗುಲ್ಜಾರ್ ನಿರ್ದೇಶನದ ಈ ಚಿತ್ರದಲ್ಲಿ ದೀಪಿಕಾಳದ್ದು ಆ್ಯಸಿಡ್ ಸಂತ್ರಸ್ತೆಯ ಪಾತ್ರ. ಆ್ಯಸಿಡ್ ದಾಳಿಗೆ ಒಳಗಾಗಿ ಬದುಕಿ ಉಳಿದು ಟೀವಿ ನಿರೂಪಕಿಯಾಗಿ ಬದುಕು ಕಟ್ಟಿಕೊಂಡಿರುವ ಲಕ್ಷ್ಮಿ ಅಗರ್‌ವಾಲ್ ನಿಜಜೀವನದ ಕಥೆಯಿದು. ಪಾತ್ರಕ್ಕೆ ಸಿನಿಮಾದಲ್ಲಿ ಮಾಲತಿ ಎನ್ನುವ ಹೆಸರು ನೀಡಲಾಗಿದೆ. ಈ ಪಾತ್ರಕ್ಕೆ ದೀಪಿಕಾ ಸಾಕಷ್ಟು ಪೂರ್ವಸಿದ್ಧತೆ ಮಾಡಿಕೊಂಡಿದ್ದಾಳೆ. ಮುಂದಿನ ವರ್ಷ ಜನವರಿಯಲ್ಲಿ ಚಿತ್ರ ಬಿಡುಗಡೆ ಎಂದು ಮೇಘನಾ ಪ್ರಕಟಿಸಿಯಾಗಿದೆ.



'ಛಪಾಕ್' ಸಿನಿಮಾದಲ್ಲಿ ದೀಪಿಕಾ

33ರ ಹರೆಯದಲ್ಲೂ ತನ್ನ ಮೈಕಟ್ಟನ್ನು ಹಿಂದಿನಂತೆಯೇ ಉಳಿಸಿಕೊಂಡಿರುವ ದೀಪಿಕಾ ಅದಕ್ಕಾಗಿ ಹೊಟ್ಟೆತುಂಬ ತಿನ್ನುವುದನ್ನು ಬಿಟ್ಟಿಲ್ಲವಂತೆ. ಆಕೆ ಚಿಕ್ಕಂದಿನಿಂದಲೂ ತಿಂಡಿಪೋತಿಯಂತೆ. 'ಈಗಲೂ ಹಾಗೆಯೇ. ಮದುವೆಯಾದ ಮೇಲೂ ಆಕೆಯ ಆಹಾರ ಅಭ್ಯಾಸ ಬದಲಾಗಿಲ್ಲ' ಎಂದು ಪತಿ ರಣ್‌ವೀರ್ ಹೇಳಿದ್ದಾನೆ. ಅದಕ್ಕೆ ತಕ್ಕಂತೆ ಇನ್‌ಸ್ಟಾಗ್ರಾಂನಲ್ಲಿ ಆಕೆ ತಟ್ಟೆಯನ್ನು ತೊಡೆಯ ಮೇಲಿಟ್ಟು ತಿಂಡಿ ಮುಕ್ಕುತ್ತಿರುವ ಬಾಲ್ಯದ ಚಿತ್ರವೊಂದನ್ನು ಹಾಕಿದ್ದಾಳೆ. ಆದರೆ 'ಮದುವೆಯಾದ ಬಳಿಕ ನನ್ನ ಗಂಡನಿಗೆ ಶಿಸ್ತು ಕಲಿಸುವ ಅಗತ್ಯವಿದೆ. ಅದರಲ್ಲೇ ನಾನು ತೊಡಗಿಕೊಂಡಿದ್ದೇನೆ' ಎಂದೂ ಹೇಳಿದ್ದಾಳೆ ದೀಪಿಕಾ. ಈ ಪತಿ–ಪತ್ನಿ ಜೋಡಿ ಜಾಹೀರಾತುದಾರರ ಮೇಲೂ ಮೋಡಿ ಹಾಕಿದೆ. ಈ ಹಿಂದೆ ವಿರಾಟ್ ಕೊಹ್ಲಿ–ಅನುಷ್ಕಾರನ್ನು ತಮ್ಮ ಬಟ್ಟೆಬರೆಗಳ ಮಾಡೆಲಿಂಗ್‌ಗೆ ಜೋರಾಗಿ ಬಿಂಬಿಸುತ್ತಿದ್ದ ಕಂಪೆನಿಯೊಂದು ಈಗ ರಣ್‌ವೀರ್–ದೀಪಿಕಾರನ್ನು ಹೆಚ್ಚಾಗಿ ಪ್ರೊಜೆಕ್ಟ್ ಮಾಡುತ್ತಿದೆ. ■



# ಟೈಗರ್ ಖುಷಿ

ಟೈಗರ್ ಶ್ರಾಫ್ ಖುಷಿಯಾಗಿದ್ದಾನೆ. 'ಸ್ಟೂಡೆಂಟ್ ಆಫ್ ದಿ ಇಯರ್–2' ಟ್ರೈಲರ್ ಬಿಡುಗಡೆಯಾಗಿ ಎಲ್ಲರ ಕುತೂಹಲ ಕೆರಳಿಸಿದೆ. ಮೇ ಎರಡನೇ ವಾರದಲ್ಲಿ ಚಿತ್ರವೂ ಥಿಯೇಟರ್‌ಗಳಿಗೆ ಬರಲಿದೆ. ಅನನ್ಯಾ ಪಾಂಡೆ ಮತ್ತು ತಾರಾ ಸುತಾರಿಯಾ ಎಂಬ ಇಬ್ಬರು ಹೊಸ ನಟಿಯರೊಂದಿಗೆ ಟೈಗರ್ ಕುಣಿದಿರುವ ಹಾಡೊಂದು ಈಗಾಗಲೇ ದೊಡ್ಡ ಸುದ್ದಿಯಾಗಿದೆ. ಈ ಹಿಂದೆ ಕರಣ್ ಜೋಹರ್ ನಿರ್ದೇಶಿಸಿದ 'ಸ್ಟೂಡೆಂಟ್ ಆಫ್ ದಿ ಇಯರ್' ಚಿತ್ರ ಸೂಪರ್ ಹಿಟ್ ಆಗಿ ಬಾಲಿವುಡ್‌ನಲ್ಲಿ ಮೂವರನ್ನು ಜನಪ್ರಿಯತೆಯ ತುತ್ತತುದಿಗೇರಿಸಿತು. ಅಲಿಯಾ ಭಟ್, ವರುಣ್ ಧವನ್ ಮತ್ತು ಸಿದ್ಧಾರ್ಥ ಮಲ್ಹೋತ್ರಾ ಆ ಚಿತ್ರದಲ್ಲಿ ಸುದ್ದಿ ಮಾಡಿದವರು. ಇವರಲ್ಲಿ ಅಲಿಯಾ ಮತ್ತು ವರುಣ್ ಅವರ ನಾಗಾಲೋಟ ಬಾಲಿವುಡ್‌ನಲ್ಲಿ ಮುಂದುವರಿದಿದೆ. ಸಿದ್ಧಾರ್ಥ ಮಾತ್ರ ಆರಕ್ಕೇರದೆ ಮೂರಕ್ಕಿಳಿಯದೆ ಉಳಿದುಕೊಂಡಿದ್ದಾನೆ. ಈಗ ಟೈಗರ್ ಶ್ರಾಫ್ ಜೊತೆಗೆ ನಟಿಸುತ್ತಿರುವ ಅನನ್ಯಾ ಮತ್ತು ತಾರಾ ಈ ಚಿತ್ರದ ಬಗ್ಗೆ ಅಪಾರ ನಿರೀಕ್ಷೆ ಇಟ್ಟುಕೊಂಡಿದ್ದಾರೆ. ಒಂದು ವರ್ಷದ ಹಿಂದೆ ಶೂಟಿಂಗ್ ಆರಂಭಿಸಿದ ಚಿತ್ರತಂಡ ಈಗ ಚಿತ್ರದ ಪ್ರಮೋಷನ್‌ನಲ್ಲಿ ಬ್ಯುಸಿಯಾಗಿದೆ. 'ಭಾಗಿ–2' ದೊಡ್ಡ ಯಶಸ್ಸು ಪಡೆದಂತೆಯೇ ಈ 'ಸ್ಟೂಡೆಂಟ್–2' ಚಿತ್ರವೂ ಸೂಪರ್‌ಹಿಟ್ ಆಗಲಿದೆ ಎಂದು ಟೈಗರ್ ಅಭಿಮಾನಿಗಳೂ ಕಾಯುತ್ತಿದ್ದಾರೆ.

■ ಹನಿ